## ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಎಂವೈಎಸ್\414\2015\ಉನಿವಿ–4

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:25/01/2018

### ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

**ವಿಷಯ:** ದೂರುದಾರರಾದ ಶ್ರೀ.ನಾಗರಾಜ ಅರಸ್.ಪಿ ಬಿನ್ ಕೆ.ಪುಟ್ಟರಾಜ ಅರಸ್, ಅಲಗೂರು ಗ್ರಾಮ, ಟಿ.ನರಸೀಪುರ ತಾಲ್ಲೂಕ್, ಮೈಸೂರು ಜಿಲ್ಲೆ ರವರ ದೂರನ್ನು ಪರಿಹರಿಸುವ ಬಗ್ಗೆ.

**********

ಮೈಸೂರು ಜಿಲ್ಲೆ ಟಿ.ನರಸೀಪುರ ತಾಲ್ಲೂಕ್ ಅಲಗೂರು ಗ್ರಾಮ ನಿವಾಸಿಯಾದ ಶ್ರೀ.ನಾಗರಾಜ ಅರಸ್.ಪಿ ಬಿನ್ ಕೆ.ಪುಟ್ಟರಾಜ ಅರಸ್ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ಮೈಸೂರು ಜಿಲ್ಲೆ ಕಬಿನಿ ಜಲಾಶಯ ಯೋಜನೆಯ ವಿಶೇಷ ಭೂ ಸ್ವಾಧೀನಾಧಿಕಾರಿಯಾದ ಶ್ರೀಮತಿ.ಅನಿತಾ [ಇನ್ನು ಮುಂದೆ "ಎದುರುದಾರರು" ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು. ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದದೆ.

2. **ದೂರಿನ ಸಂಕ್ಷಿಪ್ತ ವಿವರಣೆ:–**

ದೂರುದಾರರ ಬಾಬ್ತು ಟಿ.ನರಸೀಪುರ ತಾಲ್ಲೂಕ್ ಕಸಬಾ ಹೋಬಳಿ ಅಲಗೂರು ಗ್ರಾಮದ ಸರ್ವೆ ನಂ.507/1 ರಿಂದ 4 ಮತ್ತು 200/3 ಹಾಗೂ ಮೂಗೂರು ಹೋಬಳಿ ಚೌಹಳ್ಳಿ ಗ್ರಾಮದ ಸರ್ವೆ ನಂ.161/4ಬಿ ಸ್ವತ್ತುಗಳು ಕಬಿನಿ ನಾಲೆಗೆ ಭೂ ಸ್ವಾಧೀನ ಪಡಿಸಿಕೊಂಡು 24 ವರ್ಷಗಳು ಕಳೆದರೂ ಭೂ ಸ್ವಾಧೀನವಾದ ಬಗ್ಗೆ ಆರ್‌ಟಿಸಿ ಯಲ್ಲಿ ಇಂಡೀಕರಣವಾಗಿಲ್ಲ. ಸರ್ವೆ ನಕ್ಷೆಯಲ್ಲಿ ದುರಸ್ತಿಯಾಗಿಲ್ಲ. ಸದರಿ ಕೆಲಸ ವಹಿಸುವಲ್ಲಿ ಎದುರುದಾರರು ನಿರ್ಲಕ್ಷ್ಯ ತೋರಿದ್ದಾರೆ ಮತ್ತು ತಹಶೀಲ್ದಾರ್ ಕಛೇರಿಯ ಆರ್‌ಟಿಸಿ ಗಳಲ್ಲಿ ಮತ್ತು ಸರ್ವೆ ಇಲಾಖೆಯ ದಾಖಲೆಗಳನ್ನು ದುರಸ್ತಿ ಮಾಡಿಸುವಂತೆ ಆದೇಶಿಸಲು ಕೋರಿದ್ದಾರೆ.

3. ದೂರಿನ ಬಗ್ಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ–

ಭೂ ಸ್ವಾಧೀನಕ್ಕೊಳಪಟ್ಟಿರುವ ಜಮೀನುಗಳಿಗೆ ಸಂಬಂಧಿಸಿದಂತೆ ದೂರುದಾರರು ನಿಯಮಾನುಸಾರ ಪರಿಹಾರ ಪಡೆದಿದ್ದಾರೆ. ಸಾಮಾನ್ಯವಾಗಿ ಭೂ ಸ್ವಾಧೀನ ಪ್ರಾರಂಭವಾದಲ್ಲಿ ಅಂದಾಜು ನಕ್ಷೆ ಮಾಡಲಾಗುತ್ತದೆ. ಜಂಟಿ ಅಳತೆಯ ಸಮಯದಲ್ಲಿ ಪ್ರತಿಯೊಂದು ಸರ್ವೆ ನಂಬರಿನ ವಿವರವನ್ನು ಪಕ್ಕಾ ಪುಸ್ತಕದಲ್ಲಿ ದಾಖಲಿಸಿ, ಸರ್ವೆವಾರು ಈ ಜಂಟಿ ಅಳತೆಯನ್ನು ಆಧರಿಸಿ, ಅಂತಿಮ ಅಧಿಸೂಚನೆಯನ್ನು ಪ್ರಕಟಿಸಲಾಗುತ್ತದೆ. ಇದಾದ ನಂತರ, ಐತೀರ್ಪು ರಚಿಸಿ ಸಂಬಂಧಿಸಿದವರಿಗೆ ಪರಿಹಾರ ಪಾವತಿಸಲಾಗುತ್ತದೆ. ದೂರುದಾರರು ಹೇಳಿರುವ ಜಮೀನಿನ ಪಕ್ಕಾ ಪುಸ್ತಕ ಕಡತದಲ್ಲಿ ಲಭ್ಯವಿರದ ಕಾರಣ, ಅವರಿಗೆ ಹಿಂಬರಹ ನೀಡಿದೆ. ಸಾಮಾನ್ಯವಾಗಿ ಜಂಟಿ ಅಳತೆ ಪೂರೈಸಿದ ಮೇರೆಗೆ ಸದರಿ ತಃಖ್ತೆಗೆ ಭೂ ದಾಖಲೆಗಳ ಸಹಾಯಕ ನಿರ್ದೇಶಕರು ಹಾಗೂ ವಿಶೇಷ ಭೂ ಸ್ವಾಧೀನಾಧಿಕಾರಿ ಜಂಟಿಯಾಗಿ ಸಹಿ ಮಾಡಿದ ನಂತರ ಒಂದು ಜಂಟಿ ಅಳತೆ ತಃಖ್ತೆ ಪ್ರತಿಯೊಡನೆ ಪಕ್ಕಾ ಪುಸ್ತಕದ ಪ್ರತಿಯನ್ನು ತಮ್ಮ ಕಛೇರಿಗೆ ಸಲ್ಲಿಸಿದ್ದಾರೆ. ತದನಂತರ, ಸರ್ಕಾರದ ಅನುಮೋದನೆಗಾಗಿ ಜಿಲ್ಲಾಧಿಕಾರಿಗಳ ಮೂಲಕ ಸಲ್ಲಿಸಲಾಗುತ್ತದೆ. ಆದರೆ, ಸದರಿ ಅಟ್ಲಾಸ್ ಮತ್ತು ಟಿಪ್ಪಣಿ ಪ್ರತಿ ಪ್ರಸ್ತಾಪಿತ ಪ್ರಕರಣದ ಕಡತದಲ್ಲಿ ಲಭ್ಯವಿಲ್ಲ. ನಕ್ಷೆ ಮತ್ತು ಇತರೆ ದಾಖಲೆ ವಿಚಾರವಾಗಿ ದಿ:24/11/14ರಂದು ಮೈಸೂರಿನ ಭೂ ದಾಖಲೆಗಳ ಸಹಾಯಕ ನಿರ್ದೇಶಕರಿಗೆ ಪತ್ರ ಬರೆದು ಲಭ್ಯವಿರುವ ದಾಖಲೆಗಳನ್ನು ಅರ್ಜಿದಾರರಿಗೆ ನೀಡಲಾಗುವುದು. ಅವುಗಳನ್ನು ಆಧರಿಸಿ ಹಾಗೂ ಸಂಬಂಧಿತ ಸರ್ವೆ ವಿಭಾಗದಲ್ಲಿ ಇರಬಹುದಾದ ಮೂಲ ದಾಖಲೆಗಳನ್ನು ಪರಿಶೀಲಿಸಿ, 11ಇ ನಕ್ಷೆ ಮತ್ತು ದುರಸ್ತಿ ಪೋಡಿಗಾಗಿ ಕ್ರಮ ವಹಿಸಬಹುದಾಗಿದೆಯೆಂದು ತಿಳಿಸಿದೆ. ನಕ್ಷೆಗೆ ಸಂಬಂಧಿಸಿದಂತೆ ಭೂ ದಾಖಲೆಗಳ ವಿಭಾಗದವರು ಜೆಎಂಸಿ ನಕ್ಷೆಯನ್ನು ತಯಾರಿಸುವವರಾಗಿದ್ದ ಅವರ ಬಳಿಯು ಮೂಲ ಪ್ರತಿಗಳು ಲಭ್ಯವಿದ್ದರೂ ಮತ್ತು ತಹಶೀಲ್ದಾರ್‌ರ ಅಧೀನದಲ್ಲಿಯೇ ಭೂ ದಾಖಲೆ ವಿಭಾಗ ಇರುವುದರಿಂದ, ಅವರ ಹಂತದಲ್ಲಿ ದುರಸ್ತಿ ಕಾರ್ಯ ಕೈಗೊಳ್ಳಬಹುದಾಗಿತ್ತು. ಭೂ ಸ್ವಾಧೀನವಾಗಿರುವ ಜಮೀನಿನ ಮಾಹಿತಿಯನ್ನು ಆರ್‌ಟಿಸಿ ಯಲ್ಲಿ ದಾಖಲಿಸಲು ಕಾರ್ಯಕ್ರಮವನ್ನು ಹಮ್ಮಿಕೊಂಡು ಈವರೆವಿಗೂ ಅಂದಾಜು 735 ಸರ್ವೆ ನಂಬರುಗಳ ಪೈಕಿ 241 ಸರ್ವೆ ನಂಬರುಗಳಲ್ಲಿ ದಾಖಲಾಗಿದೆ. ಅಲ್ಲದೇ ಉಳಿದ ಪ್ರಕರಣಗಳಲ್ಲೂ ಆರ್‌ಟಿಸಿ ಯಲ್ಲಿ ದಾಖಲಿಸುವ ಕ್ರಮ ವಹಿಸಲಾಗಿದೆ. ಒಟ್ಟಾರೆ 13 ತಾಲ್ಲೂಕಿನಿಂದ ಈವರೆವಿಗೆ 2354.19 ಎಕರೆಗೆ ಸಂಬಂಧಿಸಿದಂತೆ 6076 ಸರ್ವೆ ನಂಬರಿನ ಪಹಣಿಗಳಲ್ಲಿ ಕಾವೇರಿ ನೀರಾವರಿ ನಿಗಮ ನಿಯಮಿತ ಎಂದು ದಾಖಲಿಸಲು ಕ್ರಮ ವಹಿಸಲಾಗಿದೆ. ಅಲ್ಲದೆ, 14414 ಆರ್‌ಟಿಸಿ ಗಳಲ್ಲಿನ ಕಾಲಂ 9ರಲ್ಲಿ ಭೂ ಸ್ವಾಧೀನದ ವಿವರ ದಾಖಲಾಗಿದೆ. ಅದೇ ರೀತಿ, 5041 ಆರ್‌ಟಿಸಿ ಗಳಲ್ಲಿ ಕಾಲಂ 11ರಲ್ಲಿ ಭೂ ಸ್ವಾಧೀನದ ವಿವರ ದಾಖಲಾಗಿದೆ. ಅರ್ಜಿದಾರರ ಭೂ ಸ್ವಾದೀನವಾಗಿರುವ ಜಮೀನಿರುವ ಅಲಗೋಡು ಪಹಣಿಯಲ್ಲಿ ಭೂ ಸ್ವಾಧೀನ ದಾಖಲಾಗಿದ್ದು, ಚೌಹಳ್ಳಿ ಗ್ರಾಮಕ್ಕೆ ಸಂಬಂಧಿಸಿದಂತೆ ಇಂಡೀಕರಣಕ್ಕಾಗಿ ತಾಲ್ಲೂಕ್ ಕಛೇರಿಯಲ್ಲಿ ಕ್ರಮ ವಹಿಸಿದ್ದಾರೆ. ವಿಶೇಷ ಭೂ ಸ್ವಾಧೀನಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುವ ಅವಧಿಯಲ್ಲಿ ಭೂ ಸ್ವಾಧೀನವಾದ ಜಮೀನಿನ ಪಹಣಿಗಳಲ್ಲಿ ಇಂಡೀಕರಣ ಮಾಡಿಸಲು ಮತ್ತು ದುರಸ್ತಿ ಮಾಡಿಸಲು ಹೆಚ್ಚಿನ ಆಸಕ್ತಿ ವಹಿಸಿ

Sd/-

ಕಾರ್ಯನಿರ್ವಹಿಸಿದೆಯೇ ಹೊರತು, ಯಾವುದೇ ಕರ್ತವ್ಯ ಲೋಪವನ್ನು ಎಸಗಿಲ್ಲವೆಂದು ಮತ್ತು ದೂರನ್ನು ಕೈಬಿಡಲು ಕೋರಿದ್ದಾರೆ.

4. ಎದುರುದಾರರ ಆಕ್ಷೇಪಣೆಗೆ ದೂರುದಾರರ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ –

ಈ ಸಂಸ್ಥೆಯಿಂದ ನೋಟೀಸ್ ಕೊಟ್ಟ ನಂತರ ಎದುರುದಾರರು ಎಚ್ಚೆತ್ತುಕೊಂಡು ಆರ್‌ಟಿಸಿ ಯಲ್ಲಿ ಇಂಡೀಕರಣ ಮಾಡಿಸಲು ಮುಂದಾಗಿದ್ದು, ಭೂ ಸ್ವಾಧೀನಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುವ ಅವಧಿಯಲ್ಲಿ ಅವರು ತೋರಿದ ಬೇಜವಾಬ್ದಾರಿ ಕರ್ತವ್ಯ ಲೋಪ ಆಗಿರುವುದರಿಂದ, ಅವರ ವಿರುದ್ಧ ಕಾನೂನು ಕ್ರಮ ಜರುಗಿಸಲು ಕೋರಿದ್ದಾರೆ.

5. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

ಕಬಿನಿ ಬಲದಂಡೆ ನಾಲೆಯ ಸುಜ್ಜಲೂರು ವಿತರಣಾ ನಾಲೆಗೆ ಸಾರ್ವಜನಿಕ ಉದ್ದೇಶಕ್ಕಾಗಿ ಭೂಮಿ ಬೇಕಾಗಿದೆಯೆಂದು 1988 ಮತ್ತು 1990ನೇ ವರ್ಷದಲ್ಲಿ ಸರ್ಕಾರವು ಪ್ರಾಥಮಿಕ ಅಧಿಸೂಚನೆಯನ್ನು ಹೊರಡಿಸಿದ್ದು, ದಿ:31/10/1990 ಮತ್ತು 05/12/90ರಲ್ಲಿ ಭೂ ಸ್ವಾಧೀನ ಕಾಯಿದೆಯ ಕಲಂ 6ರಡಿ ಅಂತಿಮ ಅಧಿಸೂಚನೆಯನ್ನು ಹೊರಡಿಸಿದೆ. ಅದರಂತೆ ದೂರುದಾರರ ತಂದೆ ಶ್ರೀ.ಕೆ.ಪುಟ್ಟರಾಜೇ ಅರಸ್ ಬಿನ್ ಕೆಂಪರಾಜೇ ಅರಸ್ ರವರ ಹೆಸರಿನಲ್ಲಿದ್ದ ಕಸಬಾ ಹೋಬಳಿ ಅಲಗೂರು ಗ್ರಾಮ ಮತ್ತು ಮೂಗೂರು ಹೋಬಳಿ ಚೌಹಳ್ಳಿ ಗ್ರಾಮದಲ್ಲಿರುವ ಜಮೀನುಗಳು ಭೂ ಸ್ವಾಧೀನವಾಗಿದೆ. ಭೂ ಸ್ವಾಧೀನ ಪಡಿಸಿಕೊಂಡು 24 ವರ್ಷಗಳು ಕಳೆದರೂ ಭೂ ಸ್ವಾಧೀನವಾದ ಬಗ್ಗೆ ಆರ್‌ಟಿಸಿ ಯಲ್ಲಿ ಇಂಡೀಕರಣವಾಗಿಲ್ಲ. ಸರ್ವೆ ನಕ್ಷೆಯಲ್ಲಿ ದುರಸ್ತಿಯಾಗಿಲ್ಲ ಎನ್ನುವುದು ದೂರುದಾರರ ಕುಂದುಕೊರತೆಯಾಗಿದ್ದು, ಎದುರುದಾರರು ಕಬಿನಿ ಜಲಾಶಯ ಯೋಜನೆಯ ವಿಶೇಷ ಭೂ ಸ್ವಾಧೀನಾಧಿಕಾರಿಯಾಗಿ ದಿ:02/09/13 ರಿಂದ 04/02/15ರವರೆಗೆ ಕಾರ್ಯ ನಿರ್ವಹಿಸಿದ್ದು, ಭೂ ಸ್ವಾಧೀನವಾದ ಜಮೀನುಗಳ ಸರ್ವೆ ನಂಬರಿನ ಆರ್‌ಟಿಸಿ ಕಾಲಂ 9ರಲ್ಲಿ 'ಕಾವೇರಿ ನೀರಾವರಿ ನಿಗಮ ನಿಯಮಿತ' ಎಂದು ನಮೂದಿಸಿ, ನಮೂದು ಮಾಡಿರುವ ಆರ್‌ಟಿಸಿ ಪ್ರತಿಗಳನ್ನು ಕಳುಹಿಸಿಕೊಡಲು ಮತ್ತು ನಮೂದು ಮಾಡಿರುವ ವಿಸ್ತೀರ್ಣದ ವಿವರಗಳನ್ನು ಕಾವೇರಿ ನೀರಾವರಿ ನಿಗಮ ನಿಯಮಿತ, ಮೈಸೂರು ರವರಿಗೆ ವಿವರ ನೀಡುವಂತೆ ಎದುರುದಾರರು ದಿ:21/02/14ರ ಪತ್ರ ಸಂ:ಎಲ್‌ಎಕ್ಯೂ:ನಂ.ಗೂ.ಸಿ.ಆರ್. 01/13–14ರಲ್ಲಿ ಟಿ.ನರಸೀಪುರ ತಾಲ್ಲೂಕ್ ತಹಶೀಲ್ದಾರ್‌ರವರಿಗೆ ಸೂಚಿಸಿದ್ದಾರೆ. ಆದಕಾರಣ, ಭೂ ಸ್ವಾಧೀನವಾದ ಸ್ವತ್ತುಗಳ ಪಹಣಿ ಇಂಡೀಕರಣಕ್ಕಾಗಿ ಎದುರುದಾರರು ಕ್ರಮ ಕೈಗೊಂಡಿಲ್ಲ ಎಂದು ದೂರಿನಲ್ಲಿ ಮಾಡಿದ ಆಪಾದನೆ ನಂಬತಕ್ಕದ್ದಲ್ಲ. ಎದುರುದಾರರು ತಮ್ಮ ಆಕ್ಷೇಪಣೆಯೊಂದಿಗೆ ಹಾಜರುಪಡಿಸಿರುವ ಅಲಗೂರು ಗ್ರಾಮದ ಸರ್ವೆ ನಂ.507/1 ರಿಂದ 4 ಮತ್ತು 200/3ರ ಪಹಣಿ ಕಾಲಂ ನಂ.9ರಲ್ಲಿ ಕಾವೇರಿ ನೀರಾವರಿ ನಿಗಮ

Sd/-

ನಿಯಮಿತ ಎಂದು ದಾಖಲಾಗಿರುವುದು ಕಂಡು ಬಂದಿದೆ. ಚೌಹಳ್ಳಿ ಗ್ರಾಮಕ್ಕೆ ಸಂಬಂಧಿಸಿದ ಪಹಣಿಗೆ ಸಂಬಂಧಿಸಿದಂತೆ ಇಂಡೀಕರಣಕ್ಕಾಗಿ ತಾಲ್ಲೂಕ್ ಕಛೇರಿಯಲ್ಲಿ ಕ್ರಮ ವಹಿಸಿದೆಯೆಂದು ಹೇಳಿದೆ.

6. ಆದ್ದರಿಂದ, ಟಿ.ನರಸೀಪುರ ತಾಲ್ಲೂಕ್ ಮೂಗೂರು ಹೋಬಳಿ ಚೌಹಳ್ಳಿ ಗ್ರಾಮದ ಸರ್ವೆ ನಂ.161/4B ಸ್ವತ್ತು ಕಬಿನಿ ಬಲದಂಡೆ ನಾಲೆಯ ಸಾರ್ವಜನಿಕ ಉದ್ದೇಶಕ್ಕಾಗಿ ಭೂ ಸ್ವಾಧೀನವಾದ ಬಗ್ಗೆ ಆರ್‌ಟಿಸಿ ಯಲ್ಲಿ ಇಂಡೀಕರಣಗೊಳಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(1)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ.

7. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಒಂದು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಗೇಳಿಗೆ.

30/1/18

(ನ್ಯಾಯಮೂರ್ತಿ ಸುಬಾಷ್ ಬಿ ಅಡಿ)
ಉಪಲೋಕಾಯುಕ್ತ-2,
ಕರ್ನಾಟಕ ರಾಜ್ಯ.